ಓ ಎಸ್ ನಂ. 17/2021

ಡಿ ಡಬ್ಲ್ಯು 3

ದಿನಾಂಕ 20-01-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿಗಳ ಪರಃ ಶ್ರೀ ಎಸ್ ಸಿ ಎನ್ ವಕೀಲರಿಂದಃ</u>

ವಾದಿಗಳು ನನ್ನ ಅಣ್ಣ ಸಿದ್ದಪ್ಪರವರ ಹಿರಿಯ ಹೆಂಡತಿ ಮಕ್ಕಳು ಎಂದರೆ ಸರಿ. ವಾದಿಗಳಿಗೆ ಮದುವೆ ಮಾಡಿಸಿದ್ದು ಸಿದ್ದಪ್ಪರವರೇ ಎಂದರೆ ಸರಿ. ಆ ವಿಚಾರ ನನಗೆ ವೈಯುಕ್ತಿಕವಾಗಿ ಗೊತ್ತು ಎಂದರೆ ಸರಿ. ನಾನು ಮತ್ತು ನನ್ನ ಸಹೋದರರು ಮಾಡಿಕೊಂಡ ವಿಭಾಗದಲ್ಲಿ ಸಿದ್ದಪ್ಪರವರಿಗೆ ದಾವಾ ಐಟಂ ನಂ.2 ರ ಸ್ವತ್ತು ಎಂ ಆರ್ ನಂ.24/1991-92 ರಂತೆ 12 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ. ಅದೇರೀತಿ ಅದೇ ಸರ್ವೆ ನಂಬರಿನಲ್ಲಿ 12 ಗುಂಟೆ ಬಂದಿರುತ್ತದೆ ಎಂದರೆ ಸರಿ. ಸದರಿ ವಿಭಾಗದಂತೆ ನನ್ನ ಅಣ್ಣ ಸಿದ್ದಾಚಾರ್ ರವರಿಗೆ ಮೇಲ್ಕಂಡ ಸರ್ವೆ ನಂಬರಿನಲ್ಲಿ 17 ಗುಂಟೆ ಜಮೀನು ಬಂದಿದೆ ಎಂದರೆ ಸರಿ. ಭಾಸ್ಕರಾಚಾರ್ ರವರಿಗೂ ಸಹ ಸದರಿ ವಿಭಾಗದಲ್ಲಿ 12 ಗುಂಟೆ ಜಮೀನು ಬಂದಿದೆ ಎಂದರೆ ಸರಿ. ನಮ್ಮ ಕುಟುಂಬದ ಸದಸ್ಯರ ನಡುವೆ ಮೇಲ್ಕಂಡಂತೆ ಆದ ವಿಭಾಗದಂತೆ ನಾವು ಖಾತೆಗಳನ್ನು ಸಹ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿ.

ನಿಪಿ-14 ರಂತೆ ದಿನಾಂಕ 12/12/2018 ರಂದು ನಾನು ಮಾಡಿಕೊಂಡು ಕ್ರಯಪತ್ರಕ್ಕೆ ವಾದಿಗಳ ಸಹಿಗಳನ್ನು ಪಡೆದಿರುವುದಿಲ್ಲ ಎಂದರೆ ಸರಿ. ವಾದಿಗಳು ಸಹ ಸಿದ್ದಪ್ಪರವರ ಖಾಸ ಮಕ್ಕಳು ಎಂದರೆ ಸರಿ. ನಿಪಿ-14 ರ ಕ್ರಯಪತ್ರದಲ್ಲಿ ಆಸ್ತಿಯನ್ನು ಯಾವ ಕಾರಣಕ್ಕೆ ಮಾರಾಟ ಮಾಡಲಾಗುತ್ತಿದೆ ಎಂದು ನಮೂದು ಮಾಡಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸಿದ್ದಪ್ಪರವರ ಆರೋಗ್ಯ ಸರಿ ಇರಲಿಲ್ಲ ಅದೇ ಉದ್ದೇಶಕ್ಕೆ ಮಾರಾಟ ಮಾಡಿದ್ದು ಎಂದು ನುಡಿಯುತ್ತಾರೆ. ಸಿದ್ದಪ್ಪರವರಿಗೆ ಆರೋಗ್ಯ ಸರಿ ಇಲ್ಲ ಎಂದು ನಿಪಿ-14 ರ ಕ್ರಯಪತ್ರದಲ್ಲಿ ಬರವಣಿಗೆ ಮಾಡಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಇಲ್ಲ ಆ ಪತ್ರವನ್ನು ಸ್ಟ್ಯಾಂಪ್ ವೆಂಡರ್ ಮಾಡಿದ್ದು ಎಂದು ನುಡಿಯುತ್ತಾರೆ. ನಾನು ಯೋಗೀಶ್ ಮತ್ತು ಕಾಳಮ್ಮರವರಿಗೆ ಸದರಿ ಪತ್ರಕ್ಕೆ ವಾದಿಗಳ ಸಹಿ ಮಾಡುವಂತೆ ಕರೆಯಿಲು ಹೇಳಿರುತ್ತೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ-14 ರ ಕ್ರಯಪತ್ರದಲ್ಲಿ ಇರುವ ಆಸ್ತಿ ಸಿದ್ದಪ್ಪರವರಿಗೆ ಪಿತ್ರಾರ್ಜಿತವಾಗಿ ಬಂದಿರುವ ಆಸ್ತಿ ಎಂದರೆ ಸಾಕ್ಷಿ ಇಲ್ಲ ಅದು ಸಿದ್ದಪ್ಪರವರ ಆಸ್ತಿ ಎಂದು ನುಡಿಯುತ್ತಾರೆ. ಸರ್ವೆ ನಂ.112 ರ ಆಸ್ತಿಯ ಖಾತೆ ನಮ್ಮಗಳ ಹೆಸರಿಗೆ ಯಾವ ರೀತಿ ಮಾಡಡಿಕೊಳ್ಳಲಾಗಿದೆ ಎಂದರೆ ಸಾಕ್ಷಿ ಅದು ಕುಟುಂಬದ ಆಸ್ತಿ ಎಂದು ಖಾತೆ ಮಾಡಿಕೊಳ್ಳಲಾಗಿದೆ ಎಂದು ನುಡಿಯುತ್ತಾರೆ. ನಾನು ಖರೀದಿ

ಮಾಡಿರುವ ಸ್ವತ್ತು ಸಹ ಸಿದ್ದಪ್ಪರವರ ಕುಟುಂಬದ ಆಸ್ತಿಯಾಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿ ಸಿದ್ದಪ್ಪರವರ ಕುಟುಂಬದ ಆಸ್ತಿಯಾಗಿರುವುದರಿಂದ ಸದರಿ ಆಸ್ತಿಯಲ್ಲಿ ವಾದಿಗಳಿಗೂ ಸಹ ಸಮಭಾಗದ ಹಕ್ಕು ಅಧಿಕಾರ ಇದೆ ಎಂದರೆ ಸಾಕ್ಷಿ ಅವರೂ ಸಿದ್ದಪ್ಪರವರ ಕಷ್ಟ ಸುಖಗಳನ್ನು ನೋಡಿರುವುದಿಲ್ಲ ಆದ್ದರಿಂದ ಅವರಿಗೆ ಅದರಲ್ಲಿ ಹಕ್ಕು ಇಲ್ಲ ಎಂದು ನುಡಿಯುತ್ತಾರೆ. ವಾದಿಗಳು ಸಹ ಅವಿಭಕ್ತ ಕುಟುಂಬದ ಸದಸ್ಯರಾಗಿರುವುದರಿಂದ ನಾನು ಖರೀದಿಸಿರುವ ಆಸ್ತಿಯಲ್ಲೂ ಸಹ ಅವರಿಗೆ ಸಮಾನಾದ ಹಕ್ಕು ಇದೆ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ವಾದಿಗಳ ಸಮ್ಮತಿ ಇಲ್ಲದೆ ನಿಪಿ-14 ರಡಿಯಲ್ಲಿ ನಾನು ಕ್ರಯಕ್ಕೆ ಪಡೆದಿರುವ ಸ್ವತ್ತಿನಲ್ಲಿ ವಾದಿಗಳಿಗೂ ಸಹ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ವಾದಿಗಳಿಗೆ ಮೋಸ ಮಾಡುವ ಸಲುವಾಗಿ ನಾನು, ಸಿದ್ದಪ್ಪ ಕಾಳಮ್ಮ ಮತ್ತು ಯೋಗೀಶ್ ರವರ ಜತೆ ಷರೀಕ್ಕಾಗಿ ನಿಪಿ-14 ರ ಪತ್ರವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.